<u>ದಿನಾಂಕ 13-12-2018 ರಂದು ಸಾಕ್ಷಿಧಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>: ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ :</u>

1 ನೇ ಪ್ರತಿವಾದಿಯು ದಾವಾ ಆಸ್ತಿಯನ್ನು ಮಾರಾಟ ಮಾಡಿದ್ದಾನೆ ಎಂದು ವಾದಿಯು ಈ ದಾವಾ ಸಲ್ಲಿಸಿದ್ದಾನೆ. ಅದರ ಸರ್ವೆ ನಂಬರು ನನಗೆ ಗೊತ್ತಿಲ್ಲಾ, ತಿಳುವಳ್ಳಿಯಲ್ಲಿ ನನಗೆ ಜಮೀನು ಇರುವುದಿಲ್ಲಾ. ನಾನು ಕೂಲಿ ಕೆಲಸ ಮಾಡುತ್ತೇನೆ.

ವಾದಿ ಮತ್ತು 1 ನೇ ಪ್ರತಿವಾದಿಯ ತಂದೆಯ ನಡುವೆ ವಿಭಾಗ ಆದ ಬಗ್ಗೆ ನನಗೆ ಗೊತ್ತಿಲ್ಲಾ. ದಿನಾಂಕಃ 17-08-1993 ರಂದು ವಾದಿಯ ತಂದೆ ಹಾಗೂ 1, 3, 9 ಹಾಗೂ 25 ನೇ

ಪ್ರತಿವಾದಿಯ ರ ತಂದೆಯ ನಡುವೆ ವಿಭಾಗ ಅಗಿ ನೂಂದಾಯಿತ ವಾಟ್ನಿ ಪತ್ರ ಆಗಿದೆ ಅಂದ್ರೆ ನನಗೆ ಗೊತ್ತಿಲ್ಲಾ. ನನಗೆ ದಾವಾ ಆಸ್ತಿಗಳ ಸರ್ವೆ ನಂಬರುಗಳು ಹಾೂ ಸದರಿ ಆಸ್ತಿಗಳು ಹೇಗೆ ಬಂದಿರುತ್ತವೆ ಅಂತಾ ನನಗೆ ಗೊತ್ತಿಲ್ಲಾ. ನನಗೆ ಸದರಿ ಪ್ರಕರಣದಲ್ಲಿ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ವಾದಿಯು ನನಗೆ ಹಣ ಕೊಟ್ಟು ಸಾಕ್ಷಿ ಹೇಳಲು ಕರೆದುಕೊಂಡು ಬಂದಿದ್ದಾನೆ ಅಂದ್ರೆ ಸರಿಯಲ್ಲಾ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರ ಬರೆಯಲು ವಾದಿಯೇ ಮಾಹಿತಿ ನೀಡಿದ್ದಾನೆ ಅಂದ್ರೆ ನಿಜ. ನನಗೆ ಸದರಿ ಪ್ರಕರಣದಲ್ಲಿ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ವಾದಿಯ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದ್ರೆ ಸರಿಯಲ್ಲಾ.

: ಮರುವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್

ಸಾಕ್ಷಿದಾರರ ಸಹಿ